ಅಲ್ಲಿಯೇ ಇದ್ದ ಸಿಮೆಂಟ್ ಬೆಂಚಿನ ಮೇಲೆ ಕುಳಿತೆ. ಆಕೆ ಪುಸ್ತಕಗಳನ್ನು ಸರಿಪಡಿಸುತ್ತ, "ಈಗ ನಿಮ್ಮ ಕಾರ್ಯಕ್ರಮಗಳೇನು?..." ಎಂದು ಕೇಳಿದಳು.

"ಏನಿಲ್ಲ, ಒಂದಿಷ್ಟು ಪುಸ್ತಕ ತೆಗೆದುಕೊಳ್ಳಬೇಕು..'' ಎಂದೆ ಆಕೆಯ ಕಡೆಗೆ ನೋಡದೆ.

"ಓಹ್, ಪುಸ್ತಕ ನನಗೂ ಬೇಕಾಗಿದೆ. ನಡೆಯಿರಿ ಹೋಗೋಣ. ನಾನೂ ಬರುತ್ತೇನೆ'' ಎಂದು ಆಕೆ ಹೇಳಿದಾಗ ನನ್ನ ಏಕಾಂತದ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿದಂತಾಯಿತು.

"ಹಾಗಾದ್ರೆ ಹೋಗೋಣ..." ಎಂದೆ. ಆಕೆಯಿಂದ ತಪ್ಪಿಸಿಕೊಳ್ಳುವ ದಾರಿ ಕಾಣಲಿಲ್ಲ.

ಪುಸ್ತಕದ ಅಂಗಡಿಯಲ್ಲಿ ಅವಳು ನನ್ನ ಮಗ್ಗುಲಿಗೆ ನಿಂತಿದ್ದಳು. ಅಷ್ಟು ದೊಡ್ಡ ಪುಸ್ತಕದ ಅಂಗಡಿಯಲ್ಲಿ ಬೇರೆ ಕಡೆ ನಿಂತು ಪುಸ್ತಕಗಳನ್ನು ನೋಡಬಾರದೆ!... ಎಂದುಕೊಂಡ ನಾನು ಅಲ್ಲಿಂದ ಬೇರೆಡೆಗೆ ಹೋಗಿ ಇಂಗ್ಲಿಷ್ ಪುಸ್ತಕಗಳ ಸಾಲಿನಲ್ಲಿ ನಿಂತೆ. ಅವಳು ಅಲ್ಲಿಗೂ ಬಂದಳು.

"ನಿಮ್ಮ ಕನ್ನಡ ಪುಸ್ತಕಗಳು ಸಿಗಲಿಲ್ಲವೆ...'' ಎಂದು ನಾನೇ ಕೇಳಿದೆ.

"ಇಲ್ಲ..." ಎಂದಷ್ಟೇ ಉತ್ತರಿಸಿದಳು.

ಇಬ್ಬರೂ ಸ್ವಲ್ಪ ಹೊತ್ತು ಮೌನವಾಗಿ ಪುಸ್ತಕಗಳನ್ನು ಹುಡುಕಾಡಿದೆವು.

''ನಿಮಗೆ ಯಾವ ಪುಸ್ತಕ ಬೇಕಾಗಿದೆ...'' ಎಂದು ಆಕೆ ಪುಸ್ತಕಗಳ ಮೇಲೆ ಬೆರಳಾಡಿಸುತ್ತ ಕೇಳಿದಳು.

"ನನಗೆ ಬೇಕಾಗಿರೋ ಪುಸ್ತಕಗಳನ್ನು ನೋಡಿದರೆ ನಾಳೆ ನೀವು ನನ್ನನ್ನ ಮಾತನಾಡಿಸೋದೇ ಇಲ್ಲ..." ಎಂದು ಅವಳ ಕಿವಿಯಲ್ಲಿ ಮೆಲ್ಲನೆ ಪಿಸುಗುಟ್ಟಿದೆ. ಮುಗುಳುನಗೆ ನಕ್ಕ ಆಕೆ ಪುಸ್ತಕದ ತುದಿಯಿಂದ ನನ್ನ ಹೆಗಲನ್ನು ತಿವಿದಳು. ನನಗೆ ವಿಚಿತ್ರವೆನಿಸಿತು. ನನ್ನ ಕೈಯಲ್ಲಿನ ಪುಸ್ತಕ ಕೆಳಗೆ ಬಿತ್ತು. ಆಕೆಯೇ ಎತ್ತಿಕೊಂಡಳು. ಒಂದೆರಡು ಪುಸ್ತಕಗಳನ್ನು ತೆಗೆದುಕೊಂಡು ನಾವು ಅಂಗಡಿಯಿಂದ ಹೊರ ಬಿದ್ದಾಗ ಸಂಜೆಯಾಗಿತ್ತು.

"ಇನ್ನೇನು ಕಾರ್ಯಕ್ರಮ?'' ಎಂದು ಕೇಳಿದಳು.

"ಇನ್ನೇನೂ ಇಲ್ಲ, ನೀವು ನಿಮ್ಮ ಮನೆಗೆ ನಾನು ನನ್ನ ರೂಮಿಗೆ. ನಾಳೆ ಮತ್ತೆ ಕ್ಯಾಂಪಸ್ಸಿನಲ್ಲಿ ಭೆಟ್ಟಿ...'' ಎಂದಾಗ, ಆಕೆ ಮೌನಿಯಾದಳು.

ಬೇರೆಲ್ಲೋ ನೋಡಿ ಕೆಲಕ್ಷಣಗಳ ಬಳಿಕ, "ಬಸ್ಸನ್ನಾದರೂ ಹತ್ತಿಸುತ್ತೀರೋ" ಎಂದಳು.

ನಾನು ಮರಳಿ ರೂಮಿಗೆ ಬಂದು ಕೈ ಕಾಲು ತೊಳೆದುಕೊಂಡು ಕೆಳಗಿನ ಹೋಟೆಲಿಗೆ ಹೋಗಿ ಊಟಮಾಡಿಕೊಂಡು ಬಂದೆ. ಹಾಸಿಗೆಯಲ್ಲಿ ಬಿದ್ದುಕೊಂಡು ಸಂಜೆ ಪುಸ್ತಕದ ಅಂಗಡಿಯಿಂದ ತಂದ ಗಂಟನ್ನು ಬಿಚ್ಚಿದೆ. ನೇಮಿಚಂದ್ರ, ರತ್ನಾಕರವರ್ಣಿಯವರ ಹಳಗನ್ನಡದ ಪುಸ್ತಕಗಳನ್ನು ನೋಡಿ ಆಶ್ಚರ್ಯವಾಯಿತು. ನಾನು ಕೊಂಡ ಪುಸ್ತಕಗಳೇ ಬೇರೆಯಾಗಿದ್ದವು. ಓಹ್, ನಮ್ಮ ಪುಸ್ತಕದ ಪ್ಯಾಕೆಟ್‌ಗಳು ಅದಲು ಬದಲಾಗಿದ್ದವು.

ಮುಂಜಾನೆಯ ಭೆಟ್ಟಿಯಿಂದ ಸಂಜೆ ಬೀಳ್ಕೊಡುವಾಗ ಪರಸ್ಪರ ಅಪರಿಚಿತವಾಗಿರುವ ಮುಖಗಳಲ್ಲಿ ಒಂದಷ್ಟು ಸ್ನೇಹ ಗರಿಗೆದರಿತ್ತು. ಹಾಗಾಗಿ ಬಹಳ ಪರಿಚಿತರಂತೆ ಇದ್ದೆವು. ಮುಖಗಳು ಅಪರಿಚಿತವಾದರೂ ಹೃದಯಗಳು ಎಷ್ಟು ಬೇಗ ಪರಿಚಿತವಾಗುತ್ತವೆ. ಆದರೆ ಈ ಪರಿಚಯ ನನಗೆ ಹಿತವೆನಿಸಲಿಲ್ಲ. ಹೇಗಾದರೂ ಈ ಸಹಪಾಠಿಯಿಂದ ತಪ್ಪಿಸಿಕೊಳ್ಳಬೇಕು, ಆಕೆ ಗುಂಪಿನಲ್ಲಿ ನೋಡಿದ ಒಂದು ಮುಖವಾಗಬೇಕು, ಹೆಚ್ಚು ಮಾತನಾಡಿಸಲೇ ಬಾರದು ಎಂದುಕೊಂಡಿದ್ದೆ. ನನ್ನ ಮನಸ್ಸು ಈ ಪರಿಚಯಕ್ಕೆ ಒಪ್ಪಲೇ ಇಲ್ಲ. ಅಷ್ಟು ಜನರನ್ನು ಬಿಟ್ಟು ಅವಳು ನನ್ನ ಸ್ನೇಹವನ್ನೇಕೆ ಮಾಡಿಳು? ಅವಳು ಏನಾದರೂ ಈಝಿಗೋಯಿಂಗ್ ಇರಬೇಕೆ? ಛೇ... ಛೇ ಪಾಪ ಹಾಗೆಲ್ಲ ವಿಚಾರ ಮಾಡಬಾರದು. ಮಲಗಲು ಪ್ರಯತ್ನಿಸಿದೆ.